## ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

## ಸಿ ಸಿ  ಸಂಖ್ಯೆ 477/2023

ಚಾಸಾ 28 ಫ್ರಾಸಾ 24

| | | |
|---|---|---|
| ಸಾಕ್ಷಿಯ ಹೆಸರು | : | ವೀರಭದ್ರಯ್ಯ |
| ತಂದೆಯ ಹೆಸರು | : | ಜಿ. ಚಿನ್ನಗೋವಿಂದಯ್ಯ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ನಿವೃತ್ತ ಎ.ಎಸ್.ಐ. |
| ವಾಸ ಸ್ಥಳ | : | ಕೊಳ್ಳೇಗಾಲ |

ದಿನಾಂಕ 12.01.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ – ಮಾನ್ಯ ಸಸಅ ರವರಿಂದ

ನಾನು ಜುಲೈ 2013 ರಿಂದ ಜೂನ್ 2019 ರವರೆಗೆ ಮ.ಮ. ಬೆಟ್ಟ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 19.12.2014 ರಂದು ನಾನು ಠಾಣಾಧಿಕಾರಿಯಾಗಿದ್ದಾಗ ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಚಾಸಾ-3 ರವರು ಠಾಣೆಗೆ ಹಾಜರಾಗಿ ನೀಡಿದ ಒಂದು ಗಣಕೀಕೃತ ದೂರನ್ನು ಸ್ವೀಕರಿಸಿ, ದೂರಿನೊಂದಿಗೆ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳಲ್ಲಿ ಪುಟಸಂಖ್ಯೆ 27 ಮತ್ತು 28 ಕಂಡುಬಂದಿರುವುದಿಲ್ಲ. ನಂತರ ದೂರು ಮತ್ತು ದಾಖಲೆಗಳನ್ನು ಪರಿಶೀಲಿಸಿ ಠಾಣಾ ಮೊ. ಸಂಖ್ಯೆ 83/2014 ರಂತೆ ಪ್ರಕರಣವನ್ನು ದಾಖಲಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ಕೇಸಿನ ಕಡತವನ್ನು ಚಾಸಾ-30 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಪಿ-3 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-42 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-42(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ.ಎಸ್.ಆರ್. ವಕೀಲರಿಂದಃ**

ನಾನು ದೂರಿನೊಂದಿಗೆ ನೀಡಿದ್ದ ದಾಖಲಾತಿಗಳನ್ನು ಓದಿರುವುದಿಲ್ಲ. ನಿಪಿ-5 ರಂತೆ ಕೆ. ಮಹದೇವಸ್ವಾಮಿ ಎನ್ನುವವರು ಗುತ್ತಿಗೆ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಕೆ. ಮಹದೇವಸ್ವಾಮಿ ಎಂಬುವವರು ಗುತ್ತಿಗೆ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಬಗ್ಗೆ ಗೊತ್ತಿದ್ದರೂ

ಪ್ರಾಧಿಕಾರದ ಹಿರಿಯ ಅಧಿಕಾರಿಗಳ ಒತ್ತಡದ ಮೇರೆಗೆ ಆರೋಪಿಯ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಾಧಿಕಾರದ ಮೇಲಾಧಿಕಾರಿಗಳು ತಮಗೆ ಅನುಕೂಲಕ್ಕೆ ತಕ್ಕಂತೆ ದಾಖಲೆಗಳನ್ನು ಸೃಷ್ಟಿಸಿ ಡಿ. ಗ್ರೂಪ್ ನೌಕರರ ಮೂಲಕ ಠಾಣೆಗೆ ಹಾಜರುಪಡಿಸಿರುವ ದಾಖಲೆಗಳನ್ನು ನಾನು ಸ್ವೀಕರಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿಯ ವಿರುದ್ಧ ಪ್ರಾಧಿಕಾರದ ಅಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ</u>**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.